
## ಪ್ರೇಮದ ಮಾರ್ಗ



ನಿನ್ನ ಬಣ್ಣವನ್ನು ನನಗೂ ಕೊಡು.
ನಿನ್ನ ಮನೆಬಾಗಿಲಿನ ಬಳಿ ಬಂದು ಬಿದ್ದಿದ್ದೇನೆ,
ನನ್ನ ಮರ್ಯಾದೆ–ಗೌರವಗಳನ್ನು ಕಾಪಾಡುವ ಜವಾಬ್ದಾರಿ ನಿನ್ನದು.
ನೀನೆ ನನ್ನ ಪತಿ, ಓ ಸರ್ವಶಕ್ತ ಪ್ರಿಯಕರ!
ನಿನ್ನ ಬಣ್ಣದಲ್ಲಿಯೇ ನನ್ನನ್ನೂ ಅದ್ದು.

### ಒಂದೇ ಒಂದು ಕುಡಿನೋಟ

ಒಂದೇ ಒಂದು ಕುಡಿನೋಟದಿಂದ
ನನ್ನ ಸರ್ವಸ್ವವನ್ನೂ ನೀನು ದೋಚಿಬಿಟ್ಟೆ
ನಾನು ಪ್ರೇಮಾಮೃತವನ್ನು ಕುಡಿಯುವಂತೆ ಮಾಡಿ,
ನನ್ನನ್ನು ಮತ್ತಳಾಗಿಸಿದೆ – ನಿನ್ನ ಒಂದೇ ಒಂದು ಕುಡಿನೋಟದಿಂದ.
ಹಸಿರು ಬಳೆಗಳಿದ್ದ ನನ್ನ ಸುಂದರ ತೋಳುಗಳ ಮಣಿಕಟ್ಟನ್ನು
ಗಟ್ಟಿಯಾಗಿ ಹಿಡಿದಿದೆ – ನಿನ್ನ ಒಂದೇ ಒಂದು ಕುಡಿನೋಟ.
ಓ ನನ್ನ ಬಟ್ಟೆಗೆ ಬಣ್ಣ ಹಚ್ಚುವವನೆ, ನಿನಗೆ ಅರ್ಪಿಸುತ್ತೇನೆ ನನ್ನ ಪ್ರಾಣವನ್ನು;
ನಿನ್ನ ಬಣ್ಣದಲ್ಲಿಯೇ ಅದ್ದಿದ್ದೀಯೆ ನನ್ನನ್ನೂ – ನಿನ್ನ ಒಂದೇ ಒಂದು ಕುಡಿನೋಟದಿಂದ.
ನನ್ನ ಇಡೀ ಬದುಕು ನಿನಗಾಗಿ ಮುಡುಪಾಗಿದೆ, ಓ ನಿಜ಼ಾಮ;
ನೀನು ನನ್ನನ್ನು ಮಾಡಿದ್ದೀಯಾ ಸುಹಾಗಿನಿ – ನಿನ್ನ ಒಂದೇ ಒಂದು ಕುಡಿನೋಟದಿಂದ.
ನನ್ನ ಸರ್ವಸ್ವವನ್ನೂ ನೀನು ದೋಚಿಬಿಟ್ಟೆ – ಒಂದೇ ಒಂದು ಕುಡಿನೋಟದಿಂದ.

### ಈ ಸುದ್ದಿ ಬಂದಿತು

ಈ ರಾತ್ರಿ ಸುದ್ದಿ ಬಂದಿತು, ಓ ಪ್ರಿಯಕರ, ನೀನು ಬರುತ್ತೀಯೆಂದು.
ನೀನು ಕುದುರೆ ಏರಿ ಬರುವ ರಸ್ತೆಗೆ ನನ್ನ ತಲೆಯನ್ನು ಬಲಿ ಕೊಡುತ್ತೇನೆ.
ಮರುಭೂಮಿಯ ಜಿಂಕೆಗಳೆಲ್ಲವೂ ತಮ್ಮ ತಲೆಯನ್ನು ಕೈಯಲ್ಲಿ ಹಿಡಿದುಕೊಂಡು,
ಕೊರಗುತ್ತಿವೆ – ಒಂದಲ್ಲಾ ಒಂದು ದಿನ ನೀನು ಅವುಗಳನ್ನು ಬೇಟೆಯಾಡುತ್ತೀಯೆಂದು.
ಪ್ರೇಮದ ಆಕರ್ಷಣೆ ನಿನ್ನ ಹೃದಯವನ್ನು ತಟ್ಟದೆ ಇರುವುದಿಲ್ಲ.
ನನ್ನ ಶವಯಾತ್ರೆಯ ಸಂದರ್ಭದಲ್ಲಿ ನೀನು ಬರದಿದ್ದರೆ,
ನನ್ನ ಗೋರಿಯನ್ನು ನೋಡಲು ಖಂಡಿತಾ ಬರುತ್ತೀಯೆ.
ನನ್ನಾತ್ಮವು ತನ್ನ ಕೊನೆಯ ಗಳಿಗೆಯನ್ನು ಎಣಿಸುತ್ತಿದೆ;

ಬೇಗ ಬಾ – ನಾನು ಬದುಕಿರುವಾಗಲೇ;
ನಾನಿಲ್ಲದಂತಾದಾಗ – ಯಾಕಾಗಿ ನೀ ಬರುವೆ?

### ಅವನಿಲ್ಲದ ರಾತ್ರಿಗಳು ತುಂಬಾ ದೀರ್ಘ

ಈ ದುರ್ಭಾಗ್ಯಗಳನ್ನು ಅಲಕ್ಷಿಸಬೇಡ! ಅವನು ಮತ್ತೆಲ್ಲೋ ನೋಡುತ್ತಾನೆ, ಕಥೆಗಳನ್ನು ಕಟ್ಟುತ್ತಾನೆ.